

ಮದ್ಯದ ಬಾಟಲ್‌ನಲ್ಲಿ ಸರ್ಪದ ಹೆಣಕ್ಕೆ ಮೀಯಿಸಿದ ಬೆಂಗಳೂರಿನ ಬಾರ್ ಒಂದರ ಸಾಹಸ ಈಗ ಇತಿಹಾಸ. ಲಂಡನ್ನಿನ 'ಇತಿಹಾಸದ ಕೊನೆ' ಎಂಬ ಹೆಸರಿನ ಈ ಬಿಯರ್ ಸತ್ತ ಪ್ರಾಣಿಗಳ ಹೊಟ್ಟೆಯೊಳಗೇ ಬೆಚ್ಚಗೆ ಕೂತಿದೆ. ಲಂಡನ್ನಿನ ಮದ್ಯದ ಕಂಪೆನಿಯೊಂದು ಇದು ಅತ್ಯಂತ ದುಬಾರಿ ಬಿಯರ್ ಎಂದು ಹೇಳಿಕೊಂಡಿದೆ. ಸದ್ಯ ಬಿಯರ್ ಪ್ರಾಣಿ, ಪಕ್ಷಿಗಳ ಮುಂಭಾಗದಿಂದ ಬರುತ್ತಿದೆ!

ಆಸ್ಟ್ರೇಲಿಯಾದ ಕಲಾವಿದೆ ಲೂಸಿ ರಕ್ಷಣೆಗೋಸ್ಕರ ಮೈತುಂಬ ಸಾವಿರಾರು ಸೇಫ್ಟಿ ಪಿನ್‌ಗಳನ್ನು ಅಂಟಿಸಿಕೊಂಡು ಸಾವೊಪೋಲೋದ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನ ಕೊಟ್ಟಳು. ಬರಿ ಮೈ ನೋಡಿದರೆ ಜನ ಹೆದರಬಹುದು ಎಂದು ಈ ರೀತಿ ಕವಚ ತೊಡುವ ಉಪಾಯ ಕಲಾವಿದರಿಗೆ ಮಾತ್ರ ಬರುತ್ತೆ!



ಆಸ್ಟ್ರೇಲಿಯ ಪ್ರವಾಸ ಹೋಗುವಿರಾ? ಅಕ್ಟೋಬರ್‌ವರೆಗೆ ತಡೆಯಿರಿ. ಈಗಲೇ ಹೋದರೆ ಅಲ್ಲಿ ಮಿನಿ ಮಿನಿ ತೊಂದರೆ ಎದುರಿಸಬೇಕಾಗುತ್ತದೆ. ಅಲ್ಲಿಯವರು ಮಾತನಾಡುವುದು ಎಲ್ಲಾ ಶಾರ್ಟ್‌ಫಾರ್ಮ್‌ನಲ್ಲಿ. ಮೋಬ್ಸ್ ಎಂದರೆ ಮೊಬೈಲ್, ಲ್ಯಾಪಿ ಎಂದರೆ ಲ್ಯಾಪ್‌ಟಾಪ್, ಅರ್ವೋ ಎಂದರೆ ಆಫ್ಟರ್‌ನೂನ್.. ಈಗ ವಿವಿ ತಂಡವೊಂದು ಅಧ್ಯಯನ ನಡೆಸಿ ಅರ್ಥಕೋಶ ತರಲು ಹೊರಟಿದ್ದು ಅಕ್ಟೋಬರ್‌ನಲ್ಲಿ ಬರಲಿದೆಯಂತೆ.

ಜೆಡಾಂಕ್ ಎಂದರೆ? ಜೀಬ್ರಾ ಅಪ್ಪ ಮತ್ತು ಡಾಂಕಿ (ಕತ್ತೆ) ಅಮ್ಮನ ಮರಿ. ಚೆಸ್ಟೀಟಿ ವನ್ಯಜೀವಿ ರಕ್ಷಣಾಧಾಮದಲ್ಲಿ ಹೀಗೊಂದು ಮಿಶ್ರತಳಿ ಹುಟ್ಟಿದೆ. ಅದೂ ನೈಸರ್ಗಿಕ ಮಿಲನದಿಂದ. ಎಲ್ಲೆಲ್ಲೋ ಪಟ್ಟೆ ಇಟ್ಟುಕೊಂಡು ಹುಟ್ಟಿದ ಈ ಜೆಡಾಂಕ್ ಕೆಲವು ಬಾರಿ ಅಪ್ಪನಂತೆ, ಇನ್ನು ಕೆಲವೊಮ್ಮೆ ಅಮ್ಮನಂತೆ ಅನುಕರಿಸಿ ಅಲ್ಲಿಯ ಅಧಿಕಾರಿಗಳನ್ನೇ ಕಮಂಗಿಗಳನ್ನಾಗಿ ಮಾಡುತ್ತಿದೆಯಂತೆ.





ಅಮೆರಿಕದ ಅಧ್ಯಕ್ಷ ಒಬಾಮ ತಮ್ಮ ಬಳಿ ಇರುವ ಬ್ಲ್ಯಾಕ್‌ಬೆರ್ರಿ ಸೆಲ್‌ಫೋನ್ ಬಳಸಲು ಭಾರಿ ಕಷ್ಟ ಪಡುತ್ತಿದ್ದಾರಂತೆ. ಚುನಾವಣಾ ಸಂದರ್ಭದಲ್ಲಿ ಯುವಜನ.. ತಂತ್ರಜ್ಞಾನ... ಎಂದೆಲ್ಲಾ ಮಾತನಾಡಿದ್ದ ಒಬಾಮಗೆ ಈ ಫೋನ್ ಮೇಲೆ ಯಾಕೆ ತಿರಸ್ಕಾರ ಎಂಬುದಕ್ಕೆ ಅಮೆರಿಕದಲ್ಲಿ ಜೋಕ್ ಹುಟ್ಟಿಕೊಂಡಿದೆ. ಬರುವ ಕರೆಗಳು, ಎಸ್‌ಎಂಎಸ್ ಎಲ್ಲವೂ ಶ್ವೇತಭವನದಲ್ಲಿ ದಾಖಲಾಗುತ್ತವೆ. ಕ್ಲಿಂಟನ್ ಥರ ಎಲ್ಲಾದರೂ ರಸವತ್ತಾದ ಮಾತುಕತೆಗಳಿದ್ದರೆ...

ಬ್ರಿಟನ್ ದಿವಂಗತ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್. ಇದ್ದಾಗ ಯಾರ್‍ಯಾರಿಗೆ ಹಲ್ಲು ಕಿರಿದಿದ್ದರೋ ಗೊತ್ತಿಲ್ಲ. ಈಗ ಮಾತ್ರ ಅವರ ಕೃತಕ ಹಲ್ಲು ಎಲ್ಲರ ಬಾಯಿಯನ್ನು ಅಚ್ಚರಿಯಲ್ಲಿ ಅರಳಿಸಿದೆ. ಹರಾಜಿನಲ್ಲಿ ಭರ್ಜರಿ ಹಣವನ್ನೇ ಅದನ್ನು ಇಟ್ಟುಕೊಂಡಿದ್ದ ಮಾಲೀಕನ ಜೇಬಿಗೆ ಹಾಕಿದೆ. ದೊಡ್ಡವರ ಹಲ್ಲು ಇದ್ದಾಗಲೂ ಲಕ್ಷ ಲಕ್ಷ, ಬಿದ್ದು ಹೋದಾಗಲೂ ಲಕ್ಷ ಲಕ್ಷ...



ಅಮೆರಿಕದ ರೈತನ ಫಾರ್ಮ್‌ನಲ್ಲಿ ಕಳೆದ ತಿಂಗಳು ಬಿದ್ದ ಆಲಿಕಲ್ಲು. ಎಂಟೆಂಚು ವ್ಯಾಸ, ತೂಕ ಒಂದು ಪೌಂಡ್ 15 ಔನ್ಸ್. ಈ ಆಲಿಕಲ್ಲು ಕಂಡುಬಂದಿದ್ದೇ ತಡ, ಅಲ್ಲಿಯ ರೈತರು ಜಗಳವಾಡುವಾಗ ತಲೆ ಮೇಲೆ ಕಲ್ಲು ಎತ್ತು ಹಾಕುವ ಮಾತಿನ ಬದಲು ಹಿಂದೆ ಆಲಿ ಸೇರಿಸಿಕೊಳ್ಳುತ್ತಿದ್ದಾರಂತೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65